ಅ) ಪೂರ್ಣಗೊಂಡಿರುವುದಿಲ್ಲ.

ಆ) ಸಮೀಕ್ಷೆ ಪೂರ್ಣಗೊಂಡ ನಂತರ ನಿರ್ದಿಷ್ಟ ಸಂಖ್ಯೆಯು ತಿಳಿದು ಬರುವುದು.

ಇ) ಕೊಳಚೆ ಪ್ರದೇಶದ ಜನರಿಗೆ ಮಾತ್ರ ಸೀಮಿತಗೊಳಿಸಿದೆ. ಇತರೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಜನರಿಗೂ ವಿಸ್ತರಿಸುವ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ.

ಅಡಿಕೆಗೆ ಬೆಂಬಲ ಬೆಲೆ

697(850) ಶ್ರೀ ಚಂದ್ರಶೇಖರಪ್ಪ. ಹೆಚ್.ಎಂ. (ಶಿವಮೊಗ್ಗ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಡಿಕೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ವಿವರ ತಿಳಿಸುವುದು?

ಶ್ರೀ ಎಂ. ಶಿವಣ್ಣ(ತೋಟಗಾರಿಕೆ ಸಚಿವರು) :

ಅ) ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಚಾಲಿ ಅಡಿಕೆಯನ್ನು ಖರೀದಿಸಲು ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ. ವಿಷಯವು ಭಾರತ ಸರ್ಕಾರದ ಪರಿಶೀಲನೆಯಲ್ಲಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ರಸ್ತೆ ನಿರ್ಮಾಣ

699(1115) ಶ್ರೀ ಗೋಪಾಲ ಭಂಡಾರಿ. ಹೆಚ್ (ಕಾರ್ಕಳ): ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಸಂಗ್ರಹಿಸಿದ ಹಣದಲ್ಲೇ ಗ್ರಾಮೀಣ ರೈತರಿಗೆ ಕೃಷಿ ಉತ್ಪನ್ನಗಳನ್ನು ಸಾಗಾಣಿಕೆ ಮಾಡಲು ಅನುಕೂಲವಾಗುವಂತೆ ರಸ್ತೆ ನಿರ್ಮಾಣದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದೆ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :

ಅ) ಹೌದು. ನಿಯಮಗಳಡಿಯಲ್ಲಿ ಕನಿಷ್ಟ 5.00 ರಿಂದ ಗರಿಷ್ಟ 30.00 ಲಕ್ಷಗಳವರೆಗೆ ಸಮಿತಿಯ ಆದಾಯಕ್ಕನುಗುಣವಾಗಿ ಮಾರುಟ್ಟೆ ಪ್ರಾಂಗಣಕ್ಕೆ ಸಂಪರ್ಕ ಕಲ್ಪಿಸುವ 5 ಕಿ.ಮೀ ಒಳಗಿನ ರಸ್ತೆಯನ್ನು ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್‌ಗೆ ಸೇರಿಲ್ಲದ ರಸ್ತೆಯನ್ನು ಅಭಿವೃದ್ಧಿಪಡಿಸಲು ಅವಕಾಶವಿದೆ.

ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳು

700(1116) ಶ್ರೀ ಗೋಪಾಲ ಬಂಡಾರಿ. ಹೆಚ್ (ಕಾರ್ಕಳ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಹೊಸದಾಗಿ ಮಾಡಿದ ಜನಗಣತಿಯ ಆಧಾರದ ಮೇಲೆ ಮಕ್ಕಳ ಸಂಖ್ಯೆ ಜಾಸ್ತಿ ಇರುವಲ್ಲಿ ಹೊಸ ಅಂಗನವಾಡಿಗಳನ್ನು ತೆರೆಯಲು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ: ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

2) ಅಂಗನವಾಡಿ ಕೇಂದ್ರ ಕಟ್ಟಡಗಳಿಲ್ಲದೆ ಸಮಸ್ಯೆಯಾಗುತ್ತಿದ್ದು, ಕಟ್ಟಡಗಳನ್ನು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

3) ರಾಜ್ಯದಲ್ಲಿ ಒಟ್ಟು ಎಷ್ಟು ಕಟ್ಟಡಗಳ ಅಗತ್ಯವಿದೆ?

4) ಉಡುಪಿ ಜಿಲ್ಲೆಯಲ್ಲಿ ಕಟ್ಟಡಗಳ ಅವಶ್ಯಕವಿರುವ ಕೇಂದ್ರಗಳ ತಾಲ್ಲೂಕುವಾರು ವಿವರ ಒದಗಿಸುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

1) ಹೊಸದಾಗಿ ಮಾಡಿದ ಜನಗಣತಿಯ ಆಧಾರದ ಮೇಲೆ ಹೊಸ ಅಂಗನವಾಡಿ ಕೇಂದ್ರಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುತ್ತದೆ. ಈಗಾಗಲೇ 11313 ಹೊಸ ಅಂಗನವಾಡಿ ಕೇಂದ್ರಗಳಿಗೆ ಮಂಜೂರಾತಿ ಕೋರಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಮಂಜೂರಾತಿ ನಿರೀಕ್ಷಿಸಲಾಗಿದೆ.

2) ಅನುದಾನ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

3) ರಾಜ್ಯದಲ್ಲಿ 19397 ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳ ಅಗತ್ಯವಿರುತ್ತದೆ.

4) ಉಡುಪಿ ಜಿಲ್ಲೆಯಲ್ಲಿ ಕಟ್ಟಡಗಳ ಅವಶ್ಯಕತೆ ಇರುವ ಕೇಂದ್ರಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

1.	ಉಡುಪಿ	-	215
2.	ಕಾರ್ಕಳ	-	37
3.	ಕುಂದಾಪುರ	-	85
	ಒಟ್ಟು	-	337

ಕುಂದಾಪುರ ತಾಲ್ಲೂಕಿನಲ್ಲಿ ಹಳದಿ ಪಡಿತರ ಚೀಟಿ ಹೆಚ್ಚುವರಿ ಮಂಜೂರಾತಿ

701(580) ಶ್ರೀ ಗೋಪಾಲ ಪೂಜಾರಿ. ಕೆ (ಬೈಂದೂರು): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಅರ್ಧ ಫಲಾನುಭವಿಗಳಿಗೆ ಇನ್ನೂ ಹಳದಿ ಪಡಿತರ ಚೀಟಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೆಚ್ಚುವರಿ ಪಡಿತರ ಚೀಟಿ (ಹಳದಿ) ಮಂಜೂರಾತಿ ಮಾಡಲಾಗುವುದೆ?

ಇ) ಮಾಡಲಾಗದಿದ್ದಲ್ಲಿ ಇರುವ ಸಮಸ್ಯೆಗಳೇನು?